**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**359/2020**

ಸಿ.ಡಬ್ಲ್ಯೂ –19 ಪಿ.ಡಬ್ಲ್ಯೂ -11

| | | |
|---|---|---|
| ಹೆಸರು | ಃ | ಹಣಮಂತ |
| ತಂದೆಃಗಂಡ | ಃ | ನಾಗಪ್ಪ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | ಃ | ಅಂಬಲಗಾ |

ದಿನಾಂಕಃ31.07.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-1 ರಿಂದ 18, 20 ರಿಂದ 22 ರವರ ಪರಿಚಯ ಇರುತ್ತದೆ. ಟಂಟಂ ಪಲ್ಟಿಯಾದ ಕಾರಣ ನನ್ನ ತಾಯಿ ಮೃತಪಟ್ಟಿರುತ್ತಾರೆ. ಮೃತ ರತ್ತಾಬಾಯಿ ನನ್ನ ತಾಯಿ, ಮೃತ ದಾಮುರವರ ಪರಿಚಯ ಇರುತ್ತದೆ.

ದಿ.10.02.2020 ರಂದು ಗುಡ್ಡದಿಂದ ಬರುವಾಗ ಟಂಟಂ ವೇಗವಾಗಿ ಬಂದು ಪಲ್ಟಿಯಾಗಿರುತ್ತದೆ. ಪಲ್ಟಿಯಾದ ಕಾರಣ ನನ್ನ ತಾಯಿ ಮೃತಪಟ್ಟು ಕೆಳಗೆ ಬಿದ್ದಿದ್ದರು. ನನ್ನ ತಾಯಿಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೇನು.

ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಚಾಸಾ-11 ರವರ ಮಮ್ಮಗ ಆದಿತ್ಯ ಸದರಿ ಟಂಟಂನಲ್ಲಿ ಇದ್ದನು ಎಂದರೆ ಸರಿ. ಚಾಸಾ-8 ರಿಂದ 15 ರವರು ಟಂಟಂನಲ್ಲಿ ಇದ್ದರು ಎಂದರೆ ಸರಿ. ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿದ ಕಾರಣ ಟಂಟಂ ಪಲ್ಟಿಯಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ನನ್ನ ತಾಯಿ ಹಾಗೂ ದಾಮುರವರು ತೀರಿಕೊಂಡಿರುತ್ತಾರೆ ಎಂದರೆ ಸರಿ ಉಳಿದವರಿಗೆ ರಕ್ತಗಾಯ ಅಗಿರುತ್ತದೆ ಎಂದರೆ ಸರಿ. ಟಂಟಂ ವಾಹನ ಆರೋಪಿ ಚಲಾಯಿಸುತ್ತಿದ್ದ ಎಂದರೆ ಸರಿ. ಆರೋಪಿಯೇ ಟಂಟಂಅನ್ನು ಅತಿ ವೇಗ ನಿಶಾಕಳಜಿತನದಿಂದ ಚಲಾಯಿಸಿಕೊಂಡು ಬಂದ ಕಾರಣ ಅಪಘಾತ ಆಗಿರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದಂತೆ ನಾನು ಪೋಲಿಸ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎ.ಸಿ.ಟಿ. ವಕೀಲರಿಂದ**

ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾನು ಅಲ್ಲಿಯೇ

ಇದ್ದೇನು ಎಂದು ಹೇಳುತ್ತಾರೆ. ನಾನು ಹಳ್ಳದ ಹತ್ತಿರ ಸುಮ್ಮನೇ ನಿಂತಾಗ ವಾಹನ ಬಂದು ಪಲ್ಟಿಯಾಗಿರುತ್ತದೆ. ನಾನು ಹಳ್ಳದ ಹತ್ತಿರ ಒಬ್ಬನೇ ನಿಂತಿದ್ದೇನು. ನಾನು ಘಟನಾ ದಿನದಂದೇ ಪೋಲಿಸರಿಗೆ ಘಟನೆ ಆಗುವಾಗ ನಾನು ಹಳ್ಳದ ಹತ್ತಿರ ಇದ್ದೆ ಎಂದು ಹೇಳಿರುತ್ತೇನೆ. ಪೋಲಿಸರು ನನ್ನಹೇಳಿಕೆಯನ್ನು ದಿ.11.02.2020 ರಂದು ಜಿಲ್ಲಾ ಆಸ್ಪತ್ರೆ ಕಲಬುರಗಿಯಲ್ಲಿ ನನ್ನ ಹೇಳಿಕೆಯನ್ನು ತೆಗೆದುಕೊಂಡಿರುತ್ತಾರೆ ಎಂದು ಬರೆದಿದ್ದು ನಾನು ಹಳ್ಳದ ಹತ್ತಿರ ಪೋಲಿಸರಿಗೆ ಹೇಳಿರುತ್ತೇನೆ ಎಂದು ಹೇಳುತ್ತಿದ್ದು ಯಾವುದು ನಿಜ ಎಂದರೆ ನಾನು ಎರಡೂ ಕಡೆ ಹೇಳಿಕೆ ನೀಡಿರುತ್ತೇನೆ ಎಂದು ಹೇಳಿರುತ್ತಾರೆ. ನಾನು ಜಪೋಲಿಸರಿಗೆ ಮೌಖಿಕವಾಗಿ ಹಳ್ಳದ ಹತ್ತಿರ ಹೇಳಿಕೆ ನೀಡಿರುತ್ತೇನೆ. ಅಪಘಾತವಾದ ಸಮಯದಲ್ಲಿ ಅಂಬಲಗಾ ಹೋಗುವ ರಸ್ತೆ ಸರಿ ಇರಲಿಲ್ಲ ಎಂದರೆ ಸರಿ.ನಮ್ಮ ಊರಿಗೆ ಹೋಗುವ ರಸ್ತೆ ದರ್ಗಾದ ನಂತರ ಹಳ್ಳದ ಹತ್ತಿರ ತಿರುವು ಇರುವ ಕಾರಣ ವಾಹನ ನಿಯಂತ್ರಣ ತಪ್ಪಿ ಪಲ್ಟಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಯಾವುದೇ ತಪ್ಪು ಇರುವುದಿಲ್ಲ ರಸ್ತೆ ಸರಿ ಇಲ್ಲದ ಕಾರಣ, ತಿರುವು ಇದ್ದ ಕಾರಣ ಪಲ್ಟಿಯಾಗಿರುತ್ತದೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ರಸ್ತೆ ಸರಿ ಇಲ್ಲದ ಕಾರಣ ಸಾಕಷ್ಟು ಅಪಘಾತ ಅಗುತ್ತವೆ ಎಂದರೆ ಸಾಕ್ಷಿ ಇದು ಮೊದಲ ಅಪಘಾತ ಇತ್ತು ಎಂದು ಹೇಳುತ್ತಾರೆ. ಸಾರ್ವಜನಿಕರು ಶಾಸಕರ ಮೇಲೆ ಒತ್ತಡ ಹೇರಿದ ಕಾರಣ ಈಗ ರಸ್ತೆ ಮಾಡಿರುತ್ತಾರೆ ಎಂದರೆ ಸರಿ. ರಸ್ತ ಸರಿ ಆದ ಕಾರಣ ಯಾವ ಅಪಘಾತ ಅಗುವುದಿಲ್ಲ ಎಂದರೆ ಸರಿಯಲ್ಲ ಈಗಲೂ ಅಪಘಾತಗಳು ಆಗುತ್ತಿವೆ ಎಂದು ಹೇಳುತ್ತಾರೆ. ಪರಿಹಾರ ಧನಕ್ಕಾಗಿ ನಾವು ಕಲಬುರಗಿ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿ. ಪರಿಹಾರ ಧನಕ್ಕಾಗಿ ಆರೋಪಿ ವಾಹನವನ್ನು ಅತಿ ವೇಗವಾಗಿ ನಿಶ್ಕಾಳಜಿನತದಿಂದ ಚಲಾಯಿಸುತ್ತಿದ್ದ ಎಂದು ಪ್ರಕರಣ ದಾಖಲಿಸಿರುತ್ತೇವ ಎಂದರೆ ಸರಿಯಲ್ಲ. ಘಟನೆಯಲ್ಲಿ ಆರೋಪಿಯ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ